# ಕರ್ನಾಟಕ ಲೋಕಾಯುಕ್ತ

ಸಂಖ್ಯೆ: ಕಂಪ್ಲೆಂಟ್/ಉಪಲೋಕ್ ಎಮ್.ವೈ.ಎಸ್–1603/2015/ಪಿಪಿ

ಬಹುಮಹಡಿಗಳ ಕಟ್ಟಡ,
ಡಾ: ಬಿ.ಆರ್. ಅಂಬೇಡ್ಕರ್ ವೀಧಿ,
ಬೆಂಗಳೂರು,
ದಿನಾಂಕ: 27/08/2019.

## ಕರ್ನಾಟಕ ಲೋಕಾಯುಕ್ತ ಕಾಯ್ದೆ 1984 ರ ಕಲಂ 12(1) ರನ್ವಯ ವರದಿ

ವಿಷಯ: ಪಾಳ್ಯ ಗ್ರಾಮದ ಸರ್ವೆ ನಂ. 130 ರಲ್ಲಿರುವ 1.42 ಸೆಂಟ್ಸ್ ಜಮೀನು ಸರ್ಕಾರಿ ಜಮೀನಾಗಿದ್ದು ಸದರಿ ಜಮೀನಿನಲ್ಲಿ ಅಕ್ರಮವಾಗಿ 3ನೇ ಎದುರುದಾರರು ಕಟ್ಟಡ ನಿರ್ಮಿಸಿದ್ದನ್ನು ನಿಯಮಾನುಸಾರ ತೆರವುಗೊಳಿಸಿ ಜಮೀನನ್ನು ಸರ್ಕಾರದ ವಶಕ್ಕೆ ಪಡೆದು ಸಾರ್ವಜನಿಕರಿಗೆ ಆಗುತ್ತಿರುವ ತೊಂದರೆ ನಿವಾರಣೆಗೆ ಅಗತ್ಯ ಕ್ರಮ ಜರುಗಿಸುವುದರ ನಡವಳಿಕೆ ಕುರಿತು ವರದಿ

*****

ಶ್ರೀ ರಂಗಸ್ವಾಮಿ, ಬಿನ್ ಲೇಟ್ ಪುಟ್ಟರಂಗನಾಯಕ, ಪಾಳ್ಯ ಗ್ರಾಮ ಮತ್ತು ಅಂಚೆ, ಕೊಳ್ಳೇಗಾಲ ತಾಲ್ಲೂಕು, ಚಾಮರಾಜನಗರ ಜಿಲ್ಲೆ (ಇನ್ನು ಮುಂದೆ 'ದೂರುದಾರರು' ಎಂದು ಕರೆಯಲ್ಪಡುತ್ತಾರೆ) ರವರು ಈ ದೂರನ್ನು ಸಲ್ಲಿಸಿ, (1) ಶ್ರೀಮತಿ ರಾಜಮಣಿ, ಪಂಚಾಯತ್ ಅಭಿವೃದ್ಧಿ ಅಧಿಕಾರಿ, ಪಾಳ್ಯ ಗ್ರಾಮ ಪಂಚಾಯಿತಿ, ಕೊಳ್ಳೇಗಾಲ ತಾಲ್ಲೂಕು, ಚಾಮರಾಜನಗರ ಜಿಲ್ಲೆ, (2) ಡಾ॥ ಶಿವಣ್ಣ, ಕಾರ್ಯ ನಿರ್ವಾಹಕ ಅಧಿಕಾರಿ, ಕೊಳ್ಳೇಗಾಲ ತಾಲ್ಲೂಕು ಪಂಚಾಯಿತಿ, ಕೊಳ್ಳೇಗಾಲ, ಚಾಮರಾಜನಗರ ಜಿಲ್ಲೆ (3) ಶ್ರೀ ಸಿದ್ದಪ್ಪ ಸ್ವಾಮಿ, ಬಿಲ್ ಕಲೆಕ್ಟರ್, ಪಾಳ್ಯ ಗ್ರಾಮ ಪಂಚಾಯಿತಿ, ಕೊಳ್ಳೇಗಾಲ ತಾಲ್ಲೂಕು, ಚಾಮರಾಜನಗರ ಜಿಲ್ಲೆ ಇವರುಗಳ ವಿರುದ್ಧ ತನಿಖೆ ನಡೆಸಿ ಸೂಕ್ತ ಕ್ರಮ ಜರುಗಿಸಬೇಕೆಂದು ಕೋರಿರುತ್ತಾರೆ. (4) ಶ್ರೀ ಚಿಕ್ಕ ಕೆಂಪೇಗೌಡ, ನಿವೃತ್ತ ಕಾರ್ಯದರ್ಶಿ, ಪಾಳ್ಯ ಗ್ರಾಮ ಪಂಚಾಯಿತಿ, ಕೊಳ್ಳೇಗಾಲ ತಾಲ್ಲೂಕು, ಚಾಮರಾಜನಗರ ಜಿಲ್ಲೆ, (5) ಡೆಪ್ಯೂಟಿ ಸೆಕರೇಟರಿ, ಜಿಲ್ಲಾ ಪಂಚಾಯತ್ ಇಂಜಿನಿಯರಿಂಗ್ ಉಪ ವಿಭಾಗ, ನೋಡಲ್

ಕಛೇರಿ, ನರೇಗಾ ಪ್ರೋಗ್ರ್ಯಾಮ್ ಜಿಲ್ಲಾ ಘಟಕ, (6) ಶ್ರೀ ಹೆಚ್.ಬಿ. ರವಿಕುಮಾರ್, ಸಹಾಯಕ ಕಾರ್ಯಪಾಲಕ ಅಭಿಯಂತರರು, ವಲಯ–01, ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ, ಮೈಸೂರು ರವರನ್ನು ಸೇರಿಸಿ ತನಿಖೆ ಕೈಗೊಳ್ಳಲಾಗಿರುತ್ತದೆ. ( ಇನ್ನು ಮುಂದೆ ಎದುರುದಾರರು ಎಂದು ಕರೆಯಲ್ಪಡುತ್ತಾರೆ).

ಸದರಿ ದೂರಿನ ಆಧಾರದ ಮೇಲೆ ಕರ್ನಾಟಕ ಲೋಕಾಯುಕ್ತ ಕಾಯ್ದೆ 1984ರ ಕಲಂ 9 ರಡಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ತನಿಖೆಗೆ ಆದೇಶಿಸಲಾಗಿರುತ್ತದೆ.

2. ದೂರಿನ ಸಂಕ್ಷಿಪ್ತ ಸಾರಾಂಶ:–

1. ಪಾಳ್ಯ ಗ್ರಾಮ ಪಂಚಾಯತಿಯಲ್ಲಿ ಕಾರ್ಯ ನಿರ್ವಹಿಸುತ್ತಿರುವ 3ನೇ ಎದುರುದಾರರು ದಿನಾಂಕ: 29/04/1999 ರ ನಿವೇಶನದ ಡಿಮ್ಯಾಂಡ್ ಪುಸ್ತಕದಲ್ಲಿ ತಿದ್ದಿರುತ್ತಾರೆ.
2. 2013–14ನೇ ಸಾಲಿನಲ್ಲಿ ಉದ್ಯೋಗ ಖಾತರಿ ಯೋಜನೆ ಅಡಿಯಲ್ಲಿ ಎದುರುದಾರರು ಜಿ.ಗುರುಸ್ವಾಮಿ ತೋಟದಿಂದ ಸುಬ್ಬಶೆಟ್ಟಿ ತೋಟದವರೆಗೆ 1 ಲಕ್ಷ ಅಂದಾಜು ಕೆಲಸವನ್ನು ಮಾಡದೇ ಬಿಲ್ ಮಾಡಿಕೊಂಡಿರುತ್ತಾರೆ.
3. 2003–04ನೇ ಸಾಲಿನಲ್ಲಿ ವಸತಿ ಫಲಾನುಭವಿ ಪಟ್ಟಿಯಲ್ಲಿ 3ನೇ ಎದುರುದಾರರು ಮನೆ ಮಂಜೂರು ಮಾಡಿಸಿಕೊಂಡು ಅಧಿಕಾರ ದುರ್ಬಳಕೆ ಮಾಡಿಕೊಂಡು ಸರ್ಕಾರಿ ಜಾಗದಲ್ಲಿ ಮನೆ ನಿರ್ಮಿಸಿರುತ್ತಾರೆ ಎಂದು ಆರೋಪಿಸಿ ದೂರು ಸಲ್ಲಿಸಿರುತ್ತಾರೆ.

3. 1ನೇ ಎದುರುದಾರರ ಆಕ್ಷೇಪಣೆ:–

ಪಿರ್ಯಾದುದಾರರು 2003–04ನೇ ಸಾಲಿನಿಂದ 2006–07ನೇ ಸಾಲಿನವರೆಗೆ ಅಭಿವೃದ್ಧಿ ಅನುದಾನದಲ್ಲಿ ಮನೆ ಫಲಾನುಭವಿಗಳ ಮನೆಯ ಕಾಮಗಾರಿಯ ಪೂರ್ಣ ದಾಖಲಾತಿಗಳನ್ನು ಕೇಳಿದ್ದು ಸದರಿ ಮಾಹಿತಿಯು ಪಂಚಾಯತಿಯಲ್ಲಿ ಲಭ್ಯವಿಲ್ಲದ ಕಾರಣ ಮಾಹಿತಿಯನ್ನು ನೀಡಲಾಗಿರುತ್ತದೆ ಎಂದು ನಮೂದಿಸಿರುತ್ತಾರೆ.

4. 2ನೇ ಎದುರುದಾರರ ಆಕ್ಷೇಪಣೆ:–

ದಿನಾಂಕ: 13/10/2014 ರಿಂದ 27/04/2015 ರವರೆಗೆ ತಾಲ್ಲೂಕು ಪಂಚಾಯತ್, ಕೊಳ್ಳೇಗಾಲದಲ್ಲಿ ಪ್ರಭಾರ ಕಾರ್ಯನಿರ್ವಾಹಕ ಅಧಿಕಾರಿಯಾಗಿ ಕಾರ್ಯನಿರ್ವಹಿಸುತ್ತಿರುತ್ತೇನೆ. ದೂರಿನಲ್ಲಿ ನಮೂದಿಸಿರುವ ವಿಷಯಕ್ಕೂ ನನಗೂ ಯಾವುದೇ ಸಂಬಂಧ ಇರುವುದಿಲ್ಲವೆಂದು ನಮೂದಿಸಿರುತ್ತಾರೆ.

5. 3ನೇ ಎದುರುದಾರರ ಆಕ್ಷೇಪಣೆ:

ಪಾಳ್ಯ ಗ್ರಾಮದ ಸರ್ವೆ ನಂ. 130 ವಿಸ್ತೀರ್ಣ 1–42 ಎಕರೆ ಜಮೀನಿನಲ್ಲಿ ಮನೆಯನ್ನು ನಿರ್ಮಾಣ ಮಾಡಿದ್ದು, ಸದರಿ ಜಮೀನು ಸರ್ಕಾರಿ ಬಂಡಿ ದಾರಿ ಆಗಿರುತ್ತದೆ. 2004–05ರಲ್ಲಿ ಮನೆ ಮಂಜೂರು ಮಾಡಿಕೊಂಡಿರುವ ಬಗ್ಗೆ ಈಗಾಗಲೇ ಪಾಳ್ಯ ಗ್ರಾಮ ಪಂಚಾಯತಿಯ ಅಭಿವೃದ್ಧಿ ಅಧಿಕಾರಿಗಳು ದಿನಾಂಕ: 09/04/2015 ರಂದು ನೋಟಿಸು ನೀಡಿದ್ದು, ಸದರಿ ನೋಟಿಸಿಗೆ ದಿನಾಂಕ: 11/04/2015 ರಂದು ಉತ್ತರವನ್ನು ನೀಡಿರುತ್ತೇನೆ. ಪಾಳ್ಯ ಗ್ರಾಮದ ಸರ್ವೆ ನಂ. 130 ರಲ್ಲಿ ಒಟ್ಟು ವಿಸ್ತೀರ್ಣ 1–42 ಎಕರೆ ಜಮೀನು ಸರ್ಕಾರಿ ಜಮೀನಾಗಿದ್ದು, ನನ್ನ ತಂದೆಯಾದ ಎಸ್.ಎಂ. ಸಿದ್ದನಾಯಕ ಇವರು ಹಿಂದಿನಿಂದಲೂ ವ್ಯವಸಾಯವನ್ನು ಮಾಡಿಕೊಂಡು ಅನುಭವಿಸುತ್ತಾ ಬಂದಿದ್ದ ಕಾರಣ ಸರ್ಕಾರದಿಂದ ನಮ್ಮ ತಂದೆಯವರಿಗೆ ಮಂಜೂರಾಗಿದ್ದು ಅಂದಿನ ಕೊಳ್ಳೇಗಾಲ ತಾಲ್ಲೂಕು ತಹಶೀಲ್ದಾರ್ ರವರು ದಿನಾಂಕ: 12/04/1971 ರಂದು ನನ್ನ ತಂದೆಯವರಿಗೆ ಈ ಬಗ್ಗೆ ಚೆಟ್ಟಾ ನಕಲನ್ನು ಸಹ ನೀಡಿರುತ್ತಾರೆ. ನಂತರ ತಂದೆಯವರ ಹೆಸರಿಗೆ ಖಾತೆ ವರ್ಗಾವಣೆಗೊಂಡಿದ್ದು ನನ್ನ ತಂದೆಯ ಹೆಸರಿನಲ್ಲೇ ಇರುತ್ತದೆ. ನನ್ನ ತಂದೆಯವರು ದಿನಾಂಕ: 19/11/2001 ರಂದು ಮೃತರಾಗಿರುತ್ತಾರೆ. ನಾವುಗಳು ವಾರಸುದಾರರಾಗಿದ್ದು ಚರ–ಸ್ಥಿರ ಆಸ್ತಿಗಳನ್ನು ಅನುಭವಿಸಿಕೊಂಡು ಬರುತ್ತಿದ್ದೇವೆ. ನಾನು ಆರ್ಥಿಕವಾಗಿ ಅಶಕ್ತನಾದ ಕಾರಣ ಸರ್ಕಾರದಿಂದ 2003 ಮತ್ತು 2004ನೇ ಸಾಲಿನಲ್ಲಿ ಅರ್ಜಿಯನ್ನು ನೀಡಿ ಸಂಬಂಧಪಟ್ಟ ಅಧಿಕಾರಿಗಳಲ್ಲಿ ಮನವಿ ಮಾಡಿಕೊಂಡು ನನಗೆ ಒಂದು ಮನೆಯನ್ನು ನಿರ್ಮಾಣ ಮಾಡಿಕೊಳ್ಳಲು ರೂ.20,000/– ಗಳನ್ನು ಕೊಡಿಸಿಕೊಡಬೇಕೆಂದು ಕೋರಿದ ಮೇರೆಗೆ ಸರ್ವೆ ನಂ. 130ರಲ್ಲಿ ನಾನು ನಿವೇಶನವನ್ನು ತೋರಿಸಿ, ಸದರಿ ನಿವೇಶನದಲ್ಲಿ ಒಂದು ಮನೆಯನ್ನು ನಿರ್ಮಾಣ ಮಾಡಿಕೊಂಡಿರುತ್ತೇನೆ.

3ನೇ ಎದುರುದಾರರು ತಮ್ಮ ಆಕ್ಷೇಪಣೆಗಳೊಂದಿಗೆ ಸರ್ವೆ ನಂ. 130ರ ಪಟ್ಟಾ ಪ್ರತಿ, ಋಣರಾಹಿತ್ಯ ಪ್ರಮಾಣ ಪತ್ರದ ಪ್ರತಿ, ಆರ್.ಟಿ.ಸಿ. ಪ್ರತಿಗಳು, ಮನೆಯ ಫೋಟೊ ಪ್ರತಿ, ಮನೆ ಹಕ್ಕು ಪತ್ರದ ಪ್ರತಿ ಲಗತ್ತಿಸಿರುತ್ತಾರೆ. ಮನೆ ಹಕ್ಕು ಪತ್ರದ ಪ್ರತಿ ಪರಿಶೀಲಿಸಲಾಗಿ ಸರ್ವೆ ನಂಬರ್‌ಗಳು 140, 141, 147, ಎಂದು ನಮೂದಿದ್ದು ಸರ್ವೆ ನಂ. 130 ರ ಬಗ್ಗೆ ನಮೂದಿರುವುದಿಲ್ಲ.

6. ದೂರುದಾರರ ಪ್ರತ್ಯುತ್ತರ:–

3ನೇ ಎದುರುದಾರರು ಬಂಡಿ ದಾರಿಯಲ್ಲಿ ಮನೆ ಕಟ್ಟಿಕೊಂಡು ವ್ಯವಸಾಯ ಮಾಡುವ ಜಮೀನು ಎಂದು ಸುಳ್ಳು ನೀಡಿರುತ್ತಾರೆ. 1 ಮತ್ತು 3ನೇ ಎದುರುದಾರರು ಪಂಚಾಯತಿಯಲ್ಲಿ ಉದ್ಯೋಗ ಖಾತರಿ ಯೋಜನೆಯಲ್ಲಿ ಜಿ.ಗುರುಸ್ವಾಮಿ ತೋಟದಿಂದ ಸುಬ್ಬಶೆಟ್ಟಿ ತೋಟದವರೆಗೆ ರಸ್ತೆಯನ್ನು ಮಾಡದೇ ಬಿಲ್ ಮಾಡಿಕೊಂಡಿರುತ್ತಾರೆ. ಸರ್ವೆ ನಂ. 130 ಸ್ಥಳ ಗ್ರಾಮ ಠಾಣಾ ಕೊಳಚೆ ನೀರು ಹೋಗುವ ಚಿಕ್ಕ ದೊಂಗರೆಯಲ್ಲಿ ಮನೆ ಕಟ್ಟಿಕೊಂಡು ಪಂಚಾಯತಿಯಿಂದ ಲೈಸನ್ಸ್ ಮತ್ತು ಎನ್.ಓ.ಸಿ., ಯನ್ನು ಪಡೆದಿರುವುದಿಲ್ಲ ಎಂದು ತಿಳಿಸಿರುತ್ತಾರೆ.

7. ಪೊಲೀಸ್ ಅಧೀಕ್ಷಕರು, ಮೈಸೂರು ವಿಭಾಗ, ಕರ್ನಾಟಕ ಲೋಕಾಯುಕ್ತ, ಮೈಸೂರು ರವರು ಸಲ್ಲಿಸಿರುವ ತನಿಖಾ ವರದಿ ದಿನಾಂಕ 11/07/2017ರ ಸಾರಂಶ ಈ ಕೆಳಕಂಡಂತೆ ಇರುತ್ತದೆ:-

3ನೇ ಎದುರುದಾರರು ಡಿಮ್ಯಾಂಡ್ ರಿಜಿಸ್ಟರ್ ತಿದ್ದಿರುತ್ತಾರೆಂದು ಆಪಾದಿಸಿರುವ ಬಗ್ಗೆ ಸಂಬಂಧಪಟ್ಟ ಡಿಮ್ಯಾಂಡ್ ರಿಜಿಸ್ಟರ್ ವಹಿಯನ್ನು ಪರಿಶೀಲಿಸಲಾಗಿ ತಿದ್ದಿರುವ ಬಗ್ಗೆ ಯಾವುದೇ ಗುರುತುಗಳೂ ಕಂಡು ಬಂದಿರುವುದಿಲ್ಲ.

ಸದರಿಯವರು ಗ್ರಾಮ ಪಂಚಾಯ್ತಿಯ ತಾತ್ಕಾಲಿಕ ನೌಕರರಾಗಿರುವುದರಿಂದ ಹಾಗೂ ಸರ್ಕಾರಿ ನೌಕರರಲ್ಲದ ಕಾರಣ 2003-04 ನೇ ಸಾಲಿನ ಅಭಿವೃದ್ಧಿ ಅನುದಾನದ ಪೈಕಿ ಶೇ.20ರ ಅನುದಾನದಲ್ಲಿ ಎಸ್.ಸಿ/ಎಸ್‌ಟಿ ರವರಿಗೆ ನೀಡುವ ರೂ.20,000/- ಗಳನ್ನು ಮಂಜೂರು ಮಾಡಿರುವುದು ವಿಚಾರಣಾ ಕಾಲದಲ್ಲಿ ದಾಖಲಾತಿಗಳ ಪರಿಶೀಲನೆಯಿಂದ ದೃಢಪಟ್ಟಿರುತ್ತದೆ.

2013-14ನೇ ಸಾಲಿನಲ್ಲಿ ಮಹಾತ್ಮಗಾಂಧಿ ನರೇಗಾ ಯೋಜನೆ ಅಡಿಯಲ್ಲಿ ಪಂಚಾಯತ್‌ರಾಜ್ ಇಂಜಿನಿಯರಿಂಗ್ ಉಪವಿಭಾಗ, ಕೊಳ್ಳೇಗಾಲ ಇವರ ವತಿಯಿಂದ ಶ್ರೀ ಜಿ.ಗುರುಸ್ವಾಮಿ ರವರ ತೋಟದಿಂದ ಸುಬ್ಬಶೆಟ್ಟಿ ರವರ ತೋಟದ ವರೆಗೆ ರಸ್ತೆ ಅಭಿವೃದ್ದಿ ಕಾಮಗಾರಿಯನ್ನು ಕೈಗೊಂಡಿದ್ದು, ಇದರ ಅಂದಾಜು ಮೊತ್ತ ಒಂದು ಲಕ್ಷ ರೂ.ಗಳಾಗಿದ್ದು, ಇದರಲ್ಲಿ ಯಾವುದೇ ದುರ್ಬಳಕೆ ಆಗಿರುವುದಿಲ್ಲವೆಂದು ದಾಖಲಾತಿಗಳ ಪರಿಶೀಲನೆಯಿಂದ ದೃಢಪಟ್ಟಿರುತ್ತದೆ.

ಚಾಮರಾಜನಗರ ಜಿಲ್ಲೆ, ಕೊಳ್ಳೇಗಾಲ ತಾಲ್ಲೂಕು ಪಾಳ್ಯ ಸರ್ವೆ 130ರಲ್ಲಿ 1.42 ಸೆಂಟ್ ಜಮೀನು 1986-87 ನೇ ಸಾಲಿನಿಂದಲೂ ಪಹಣಿಯಲ್ಲಿ ಎಸ್.ಎಂ.ಸಿದ್ದನಾಯಕ ಬಿನ್ ಬಿ.ಸಿ. ಮರಿಜೋಗಿನಾಯಕ ರವರ ಹೆಸರು ದಾಖಲಾಗಿರುತ್ತದೆಂದೂ, ಸದರಿಯವರಿಗೆ ಮಂಜೂರಾಗಿರುವ ಬಗ್ಗೆ ಯಾವುದೇ ದೃಡೀಕೃತ ಪ್ರತಿ ಕಛೇರಿಯಲ್ಲಿ ಇರುವುದಿಲ್ಲವೆಂದೂ, ಸದರಿ ಜಾಗವು ಮೂಲತ: ಸರ್ಕಾರಿ ಬಂಡಿದಾರಿ ಆಗಿರುವುದಾಗಿ ವರದಿ ನೀಡಿರುತ್ತಾರೆ. ವಿಚಾರಣಾ ಕಾಲದಲ್ಲಿ ಈ ಬಗ್ಗೆ ಸಂಬಂಧಪಟ್ಟ ದಾಖಲಾತಿಗಳನ್ನು ಪರಿಶೀಲಿಸಲಾಗಿ ಸದರಿ ಜಾಗವು ಸರ್ಕಾರಿ ಭೂಮಿ ಎಂದು ದೃಡಪಟ್ಟಿರುತ್ತದೆ. ಸದರಿ ಜಾಗದಲ್ಲಿ ಶ್ರೀ ಸಿದ್ದಪ್ಪಸ್ವಾಮಿ ರವರು ಸರ್ಕಾರದಿಂದ ರೂ.20,000/- ಗಳನ್ನು ಅನುದಾನ ಮಂಜೂರು ಮಾಡಿಸಿಕೊಂಡು ಮನೆ ಕಟ್ಟಿರುವುದು ವಿಚಾರಣೆಯಿಂದ ತಿಳಿದು ದೃಢಪಟ್ಟಿರುತ್ತದೆ.

ಈ ಅಕ್ರಮ ದಾಖಲೆಗೆ 1986–87ನೇ ಸಾಲಿನಲ್ಲಿ ಕರ್ತವ್ಯದಲ್ಲಿದ್ದ ಗ್ರಾಮ ಲೆಕ್ಕಿಗರಾದ ಶ್ರೀ ಯು.ರಾ. ವೆಂಕಟರಂಗರವರು ಮತ್ತು ತಹಸಿಲ್ದಾರ್ ಶ್ರೀ.ಆರ್. ನರೇಂದ್ರ ಕುಮಾರ್ ರವರುಗಳು ಕಾರಣರಾಗಿದ್ದು, ಸದರಿ ಗ್ರಾಮ ಲೆಕ್ಕಿಗರಾದ ಶ್ರೀ ಯು.ರಾ.ವೆಂಕಟರಂಗ ರವರು ಮರಣ ಹೊಂದಿರುವುದಾಗಿಯೂ ಮತ್ತು ತಹಸಿಲ್ದಾರ್ ಶ್ರೀ.ಆರ್. ನರೇಂದ್ರಕುಮಾರ್‌ರವರು ನಂಜನಗೂಡಿನಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದಾಗ ವಯೋನಿವೃತ್ತಿ ಹೊಂದಿದ್ದು, ಮೈಸೂರು ನಗರದ ಸರಸ್ವತಿಪುರಂ ನಲ್ಲಿ ವಾಸವಿರುವುದಾಗಿ ವಿಚಾರಣಾ ಕಾಲದಲ್ಲಿ ತಿಳಿದು ಬಂದಿರುತ್ತದೆ ಎಂದು ನಮೂದಿಸಿರುತ್ತಾರೆ.

8. 4ನೇ ಎದುರುದಾರರ ಆಕ್ಷೇಪಣೆಗಳು:

ಕೊಳ್ಳೇಗಾಲ ತಾಲ್ಲೂಕು, ಪಾಳ್ಯ ಗ್ರಾಮ ಪಂಚಾಯತಿಯಲ್ಲಿ ಜೂನ್ 2003 ರಿಂದ ಫೆಬ್ರವರಿ 2009 ರವರೆಗೆ ಸೇವೆ ಸಲ್ಲಿಸಿರುತ್ತೇನೆ. ನನ್ನ ಸೇವಾ ಅವಧಿಯಲ್ಲಿ 3ನೇ ಎದರುದಾರರಿಗೆ ಯಾವುದೇ ರೀತಿಯ ದಾಖಲೆಗಳನ್ನು ತಿದ್ದುಪಡಿ ಮಾಡಿರುವುದಕ್ಕೆ ಅವಕಾಶ ನೀಡಿರುವುದಿಲ್ಲ. ದಿನಾಂಕ: 25/07/2003 ರಂದು ಗ್ರಾಮ ಪಂಚಾಯತಿಯಲ್ಲಿ ನಡೆದ ವಿಶೇಷ ಸಭೆಯಲ್ಲಿ 3ನೇ ಎದುರುದಾರರನ್ನು ಪರಿಶಿಷ್ಟ ಜಾತಿ/ಪರಿಶಿಷ್ಟ ವರ್ಗ ಶೇಕಡಾ 20%ರ ಅನುದಾನದಲ್ಲಿ ಮನೆ ನಿರ್ಮಾಣಕ್ಕೆ ಫಲಾನುಭವಿಯನ್ನಾಗಿ ಸರ್ವಾನುಮತದಿಂದ ಆಯ್ಕೆ ಮಾಡಿರುತ್ತಾರೆ. ಸದರಿ ಫಲಾನುಭವಿಗೆ ಡಿಮ್ಯಾಂಡ್ ರಿಜಿಸ್ಟರ್‌ನಲ್ಲಿ ಖಾತೆಯನ್ನು ಆತನ ಹೆಸರಿಗೆ 2001–02ನೇ ಸಾಲಿನಿಂದ ಬಂದಿರುತ್ತದೆ ಎಂದು ನಮೂದಿಸಿರುತ್ತಾರೆ.

9. 5ನೇ ಎದುರುದಾರರ ಆಕ್ಷೇಪಣೆಗಳು:–

1994–95ನೇ ಸಾಲಿನಲ್ಲಿ ಕ್ರಮ ಸಂಖ್ಯೆ: 590 ಆಸ್ತಿ ಸಂಖ್ಯೆ: 162/1 ರಲ್ಲಿ ಸ್ರೀ ಸಿದ್ದಪ್ಪಸ್ವಾಮಿ ಬಿನ್ ಸಿದ್ದಪ್ಪನಾಯಕ ಮತ್ತು 162/2 ರಲ್ಲಿ ಶ್ರೀಮತಿ ನಂಜಪ್ಪ ಕೋಂ ಸಿದ್ದಪ್ಪನಾಯಕ ಎಂಬುದಾಗಿ ಹೊಸದಾಗಿ ಹೆಸರನ್ನು ಸೇರ್ಪಡೆ ಮಾಡಿರುವುದಾಗಿ ಕಂಡುಬಂದಿರುತ್ತದೆ. ದಿನಾಂಕ: 31/08/2016 ರಲ್ಲಿ ಉಪ ವಿಭಾಗಾಧಿಕಾರಿಗಳು, ಕೊಳ್ಳೇಗಾಲ ಉಪ ವಿಭಾಗ ರವರು ಈ ಜಾಗದ ಬಗ್ಗೆ ಆದೇಶ ಹೊರಡಿಸಿರುವುದನ್ನು ಆಧರಿಸಿ ಶ್ರೀ ಸಿದ್ದಪ್ಪಸ್ವಾಮಿ ಬಿನ್ ಸಿದ್ದಪ್ಪನಾಯಕರವರ ಹೆಸರನ್ನು ರಿಜಿಸ್ಟರ್ ನಲ್ಲಿ ರದ್ದುಪಡಿಸಲಾಗಿದೆ. 2003–04ನೇ ಸಾಲಿನ ಅಭಿವೃದ್ಧಿ ಅನುದಾನದಲ್ಲಿ ರೂ. 20,000/– ಅನುದಾನದಲ್ಲಿ ಮನೆ ಮಂಜೂರಾಗಿರುತ್ತದೆ. ಪಾಳ್ಯ ಗ್ರಾಮದ ಸರ್ವೆ ನಂ. 130, ವಿಸ್ತೀರ್ಣ 42 ಸೆಂಟ್ಸ್ ಜಮೀನಿನಲ್ಲಿ ಮನೆ ಕಟ್ಟಿರುವುದು ಸರ್ಕಾರಿ ಬಂಡಿದಾರಿಯಾಗಿರುತ್ತದೆ. ಸದರಿ ಜಮೀನನ್ನು ಸರ್ಕಾರದ ವಶಕ್ಕೆ ಪಡೆಯಲು ಹಾಗೂ ಕಂದಾಯ ದಾಖಲೆಗಳಲ್ಲಿ ಇಂಡೀಕರಿಸಲು ತಹಶೀಲ್ದಾರ್, ಕೊಳ್ಳೇಗಾಲ ರವರಿಗೆ ಆದೇಶಿಸಲಾಗಿದೆ. ಪ್ರಸ್ತುತದಲ್ಲಿ ಆರ್.ಟಿ.ಸಿ., ಯನ್ನು ಪರಿಶೀಲಿಸಿದಾಗ ಸದರಿ ಜಾಗ ಸರ್ಕಾರಿ ಜಾಗವೆಂದು ನಮೂದಾಗಿರುವುದು ಕಂಡುಬರುತ್ತದೆ. ಮತ್ತು ಗ್ರಾಮ ಪಂಚಾಯತಿಯಲ್ಲಿ ಉಪ ವಿಭಾಗಾಧಿಕಾರಿಗಳು, ಕೊಳ್ಳೇಗಾಲ ಉಪ ವಿಭಾಗ

ರವರ ಆದೇಶದಂತೆ ಗ್ರಾಮ ಪಂಚಾಯಿತಿಯ ಡಿಮಂಡ್ ರಿಜಿಸ್ಟರ್ ನಲ್ಲಿ ಕ್ರಮ ಸಂಖ್ಯೆ: 704, ಆಸ್ತಿ ನಂ. 162/4 ರಲ್ಲಿ ಶ್ರೀ ಸಿದ್ದಪ್ಪಸ್ವಾಮಿ ಹೆಸರಿಗೆ ಆಗಿರುವ ನಮೂದನ್ನು ರದ್ದುಪಡಿಸಲಾಗಿದೆ ಎಂದು ನಮೂದಿಸಿರುತ್ತಾರೆ.

10. 6ನೇ ಎದುರುದಾರರ ಆಕ್ಷೇಪಣೆಗಳು:-

ನಾನು ಸಹಾಯಕ ಇಂಜಿನಿಯರ್ ಆಗಿ 2013-14 ನೇ ಸಾಲಿನಲ್ಲಿ ಕೊಳ್ಳೇಗಾಲ ಪಂಚಾಯತ್ ರಾಜ್ ಇಂಜಿನಿಯರ್ ಉಪ ವಿಭಾಗದಲ್ಲಿ ಕೆಲಸ ನಿರ್ವಹಿಸುತ್ತಿದ್ದ ಸಮಯದಲ್ಲಿ ಉದ್ಯೋಗ ಖಾತ್ರಿ ಯೋಜನೆಯ ಅಡಿಯಲ್ಲಿ ಜಿ. ಗುರುಸ್ವಾಮಿ ತೋಟದಿಂದ ಸುಬ್ಬಶೆಟ್ಟಿ ತೋಟದವರಿಗೆ 1.00 ಲಕ್ಷ ರೂ.ಗಳಿಗೆ ಗ್ರಾವೆಲ್ ಹಾಕಲು ಅಂದಾಜು ಪಟ್ಟಿಯನ್ನು ತಯಾರಿಸಿ ಪಂಚಾಯಿತಿಯ ಕಾರ್ಯದರ್ಶಿ ಅಥವಾ ಪಿಡಿಓ ರವರಿಗೆ ನೀಡಲಾಗಿರುತ್ತದೆ. ಪಿಡಿಓ ಅಥವಾ ಪಂಚಾಯಿತಿ ಕಾರ್ಯದರ್ಶಿ ರವರು ಕೂಲಿ ಕರ್ಮಿಕರಿಂದ ಕೆಲಸವನ್ನು ನಿರ್ವಹಿಸಿದ ನಂತರ ಕೆಲಸವನ್ನು ಅಳತೆ ಮಾಡಿ ಎಂ.ಬಿ. ಪುಸ್ತಕದಲ್ಲಿ ನಮೂದಿಸಿ, ಪಂಚಾಯಿತಿ ವಶಕ್ಕೆ ಎಂ.ಬಿ. ಪುಸ್ತಕವನ್ನು ನೀಡಲಾಗಿರುತ್ತದೆ. ಕಾರ್ಯದರ್ಶಿ ಅಥವಾ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಯವರು ಕಾಮಗಾರಿ ನಿರ್ವಹಿಸಿದ ಕೂಲಿ ಕರ್ಮಿಕರಿಗೆ ಹಣ ಸಂದಾಯ ಮಾಡುವ ಕೆಲಸವನ್ನು ನಿರ್ವಹಿಸುತ್ತಾರೆ. ಕೂಲಿ ಕರ್ಮಿಕರಿಗೆ ಕಡ್ಡಾಯವಾಗಿ ಕೂಲಿ ಕೆಲಸ ನೀಡಬೇಕಾಗಿರುವುದರಿಂದ ಯಾವುದೇ ಕಾರಣಕ್ಕೂ ಕಾಮಗಾರಿ ನಿರ್ವಹಿಸದೆ ಎಂ.ಬಿ. ಪುಸ್ತಕದಲ್ಲಿ ಅಳತೆಯನ್ನು ನಮೂದಿಸಲು ಸಾಧ್ಯವಿರುವುದಿಲ್ಲ. ಹಾಗೂ ಈ ಹಿಂದೆ ಸಿ.ಎ.ಜಿ. (ಕೇಂದ್ರ ಲೆಕ್ಕ ಪರಿಶೋಧನೆ) ತಂಡವು ಉದ್ಯೋಗ ಖಾತ್ರಿ ಯೋಜನೆ ಕಾಮಗಾರಿಗಳ ಪರಿವೀಕ್ಷಣೆ ನಡೆಸಿರುತ್ತದೆ. ಸಿ.ಎ.ಜಿ. ತಂಡವು ಕಾಮಗಾರಿಗಳು ಪೂರೈಸಿರುವ ಬಗ್ಗೆ ಪರಿವೀಕ್ಷಣಾ ವರದಿಯನ್ನು ರಾಜ್ಯ ಸರ್ಕಾರ ಮತ್ತು ಕೇಂದ್ರ ಸರ್ಕಾರಕ್ಕೆ ನೀಡಿರುತ್ತಾರೆ ಎಂದು ನಮೂದಿಸಿರುತ್ತಾರೆ.

11. ತನಿಖಾ ಅವಧಿಯಲ್ಲಿ ಸಂಗ್ರಹಿಸಿದ ಎಲ್ಲಾ ದಾಖಲೆಗಳನ್ನು ಆಧಾರಗಳನ್ನು ಪರಿಶೀಲಿಸಲಾಗಿರುತ್ತದೆ.

2003-04ನೇ ಸಾಲಿನಲ್ಲಿ ವಸತಿ ಫಲಾನುಭವಿ ಪಟ್ಟಿಯಲ್ಲಿ 3ನೇ ಎದುರುದಾರರು ಮನೆ ಮಂಜೂರು ಮಾಡಿಸಿಕೊಂಡು ಅಧಿಕಾರ ದುರ್ಬಳಕೆ ಮಾಡಿಕೊಂಡು ಸರ್ಕಾರಿ ಜಾಗದಲ್ಲಿ ಮನೆ ನಿರ್ಮಿಸಿರುವುದಾಗಿ ಆರೋಪಿಸಿರುತ್ತಾರೆ.

3ನೇ ಎದುರುದಾರರನ್ನು 29/04/1999 ರಂದು ಹಂಗಾಮಿ ಬಿಲ್ ಕಲೆಕ್ಟರ್ ಎಂದು ನೇಮಿಸಿಕೊಂಡಿದ್ದು 23/10/1999 ರಂದು ಸಾಮಾನ್ಯ ಸಭೆಯ ನಿರ್ಣಯದಂತೆ ಖಾಯಂಗೊಳಿಸಿರುವುದು ಕಂಡುಬಂದಿರುತ್ತದೆ. ದಿನಾಂಕ: 25/07/2003 ರಂದು ಗ್ರಾಮ ಪಂಚಾಯತ್ ಸಭೆ ನಡಾವಳಿಯಲ್ಲಿ 3ನೇ ಎದುರುದಾರರನ್ನು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ ವರ್ಗದಡಿ ಶೇಕಡಾ 20% ರ ಅನುದಾನದಲ್ಲಿ ಮನೆ ನಿರ್ಮಿಸಲು ಫಲಾನುಭವಿಯಾಗಿ ಆಯ್ಕೆ ಮಾಡಿರುತ್ತಾರೆ. ಫಲಾನುಭವಿಯ ಆಯ್ಕೆ ಮತ್ತು ಮಂಜೂರಾತಿಯನ್ನು ಗ್ರಾಮ ಪಂಚಾಯ್ತಿಯ ಸಾಮಾನ್ಯ

ಸಭೆಯಲ್ಲಿ ನಿರ್ಣಯಿಸಲಾಗುತ್ತದೆ. ಪಾಳ್ಯ ಗ್ರಾಮದ ಸರ್ವೆ ನಂ. 130 ರಲ್ಲಿ 1.42 ಸೆಂಟ್ಸ್ ಜಮೀನು ಮೂಲ ದಾಖಲೆಗಳ ಪ್ರಕಾರ ಸರ್ಕಾರಿ ಬಂಡಿದಾರಿ ಪರಂಪೋಕು ಎಂದು ನಮೂದಿರುತ್ತದೆ. ಸದರಿ ಜಮೀನು 3ನೇ ಎದುರುದಾರರ ತಂದೆಯ ಹೆಸರಿಗೆ ಖಾತೆಯಾದ ಬಗ್ಗೆ ದಾಖಲೆಗಳು ಕಂದಾಯ ಇಲಾಖೆಯಲ್ಲಿ ಇರುವುದಿಲ್ಲವೆಂದು ಹಾಗೂ ತಾಲ್ಲೂಕು ಸರ್ವೆಯರ್ ಸ್ಕೆಚ್ ಪ್ರಕಾರ ಜಮೀನಿನಲ್ಲಿ ಕಟ್ಟಡ ನಿರ್ಮಿಸಿರುವುದು ಕಂಡು ಬಂದಿದೆ ಎಂದು ತಹಶೀಲ್ದಾರರು ತಮ್ಮ ವರದಿ ನೀಡಿರುತ್ತಾರೆ. ಉಪವಿಭಾಗಾಧಿಕಾರಿಗಳು ಪ್ರಕರಣ ಸಂಖ್ಯೆ: LNDCR 6/2015-16 ರಲ್ಲಿ ದಿನಾಂಕ: 31/08/2016 ರಂದು ಆದೇಶ ಮಾಡಿ ಸಿದ್ದಪ್ಪಸ್ವಾಮಿ ಸರ್ಕಾರಿ ಜಮೀನನ್ನು ಅಕ್ರಮವಾಗಿ ಒತ್ತುವರಿ ಮಾಡಿಕೊಂಡು ಖಾತೆ ಮಾಡಿಕೊಂಡಿದ್ದು ಕಂದಾಯ ಇಲಾಖೆಯಲ್ಲಿ ನಡೆದಿರುವ ಎಲ್ಲಾ ಖಾತೆ ನಡಾವಳಿಗಳನ್ನು ಕರ್ನಾಟಕ ಭೂ ಕಂದಾಯ ಕಾಯ್ದೆ ಕಲಂ 1964 ಕಲಂ 136(2) ರೀತ್ಯಾ ರದ್ದುಗೊಳಿಸಲು ಆದೇಶಿಸಿ ಜಮೀನನ್ನು ಸರ್ಕಾರದ ವಶಕ್ಕೆ ಪಡೆಯಲು ತಹಶೀಲ್ದಾರರಿಗೆ ಆದೇಶಿಸಿರುತ್ತಾರೆ.

ಸದರಿ ಆದೇಶವನ್ನು ಪ್ರಶ್ನಿಸಿ 3ನೇ ಎದುರುದಾರರು ಜಿಲ್ಲಾಧಿಕಾರಿಗಳ ನ್ಯಾಯಾಲಯದಲ್ಲಿ ಪ್ರಕರಣ ಸಂಖ್ಯೆ: **ಆರ್.ಎ. 63/2016-17** ದಾಖಲಿಸಿದ್ದು ದಿನಾಂಕ: 01/01/2018 ರಂದು ವಜಾ ಆಗಿರುವ ಬಗ್ಗೆ ಮಾಹಿತಿ ಲಭ್ಯವಾಗಿರುತ್ತದೆ. ಉಪವಿಭಾಗಾಧಿಕಾರಿಗಳ ಆದೇಶದಂತೆ ಆರ್.ಟಿ.ಸಿ. ದಾಖಲೆಯಲ್ಲಿ ತಿದ್ದುಪಡಿ ಮಾಡಿ 2016-17 ನೇ ಸಾಲಿನ ಆರ್.ಟಿ.ಸಿ. ಪ್ರತಿಯ ಕಲಂ 6, 9, ಮತ್ತು 12 ರಲ್ಲಿ ಸರ್ಕಾರ ಎಂದು ನಮೂದಿಸಿರುವುದು ಕಂಡುಬಂದಿರುತ್ತದೆ.

ಸರ್ಕಾರಿ ಬಂಡಿದಾರಿಯಲ್ಲಿ 3ನೇ ಎದುರುದಾರರು ಅಕ್ರಮವಾಗಿ ಮನೆ ಕಟ್ಟಿದ್ದು ನಿಯಮ ಬಾಹಿರವಾಗಿರುತ್ತದೆ. ದಿನಾಂಕ: 25/07/2003 ರಲ್ಲಿ ಮನೆ ಕಟ್ಟಲು 20,000/- ಹಣ ನೀಡಲು ಫಲಾನುಭವಿಯಾಗಿ ಆಯ್ಕೆ ಮಾಡಿದ್ದು ಜೂನ್ 2003 ರಿಂದ ಫೆಬ್ರವರಿ 2009 ರವರೆಗೆ 4ನೇ ಎದುರುದಾರರು ಕಾರ್ಯದರ್ಶಿಯಾಗಿ ಕರ್ತವ್ಯ ನಿರ್ವಹಿಸಿದ್ದು ಅಗತ್ಯ ಕ್ರಮ ಜರುಗಿಸದೆ ಇರುವುದು ಕಂಡುಬಂದಿರುತ್ತದೆ.

3ನೇ ಎದುರುದಾರರು ಪಾಳ್ಯ ಗ್ರಾಮದ ಸರ್ವೆ ನಂ. 130 ರಲ್ಲಿರುವ 1.42 ಸೆಂಟ್ಸ್ ಜಮೀನು ಸರ್ಕಾರಿ ಜಮೀನು ಎಂದು ಗೊತ್ತಿದ್ದು ಪಂಚಾಯ್ತಿಯ ಖಾಯಂ ಬಿಲ್ ಕಲೆಕ್ಟರ್ ಹುದ್ದೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದು ತಮ್ಮ ಸ್ಥಾನದ ದುರುಪಯೋಗಪಡಿಸಿಕೊಂಡು ಸರ್ಕಾರಿ ಜಮೀನಿನಲ್ಲಿ ಕಟ್ಟಡ ನಿರ್ಮಿಸಿ ಪಂಚಾಯ್ತಿಗೆ ಕಂದಾಯ ಪಾವತಿಸಿ, ಉಪವಿಭಾಗಾಧಿಕಾರಿಗಳ ಕಾರ್ಯಾಲಯದಲ್ಲಿ ನಡೆದ ಪ್ರಕರಣದಲ್ಲಿ ಜಮೀನಿನ ಸಂಬಂಧ ಅಗತ್ಯ ದಾಖಲೆಗಳನ್ನು ಸಲ್ಲಿಸದೆ ಇರುವುದು ಕಂಡುಬಂದಿರುತ್ತದೆ.

ತನಿಖಾ ಅವಧಿಯಲ್ಲಿ ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳಿಂದ ಮಾಹಿತಿ ಪಡೆಯಲಾಗಿದ್ದು ಸದರಿಯವರು ತಮ್ಮ ಪತ್ರದಲ್ಲಿ 3ನೇ ಎದುರುದಾರರನ್ನು ಹುದ್ದೆಯಿಂದ ವಜಾ ಮಾಡುವ ಅಧಿಕಾರ ಗ್ರಾಮ ಪಂಚಾಯತಿಗೆ ಇದ್ದು ದಿನಾಂಕ: 31/05/2018 ರಂದು ಗ್ರಾಮ ಪಂಚಾಯಿತಿ ಸಾಮಾನ್ಯ ಸಭೆಯಲ್ಲಿ ನಿಯಮಗಳ ಅನುಸಾರ ವಿಚಾರವನ್ನು ಮಂಡಿಸಿದ್ದು ವಜಾ ಮಾಡುವ ಬಗ್ಗೆ ಯಾವುದೇ ತೀರ್ಮಾನ ತೆಗೆದುಕೊಂಡಿರುವುದಿಲ್ಲವೆಂದು ಮಾಹಿತಿ ಸಲ್ಲಿಸಿರುತ್ತಾರೆ. 3ನೇ ಎದುರುದಾರರು ತಮ್ಮ ಸ್ಥಾನದ ದುರುಪಯೋಗಪಡಿಸಿಕೊಂಡಿರುವುದು ಮೇಲ್ನೋಟಕ್ಕೆ ಕಂಡುಬಂದಿರುತ್ತದೆ.

12. ಮೇಲೆ ನಮೂದಿಸಿದ ಕಾರಣಗಳಿಂದ ಮತ್ತು ತನಿಖಾ ಅವಧಿಯಲ್ಲಿ ಸಂಗ್ರಹಿಸಿದ ಆಧಾರಗಳಿಂದ ಪಾಳ್ಯ ಗ್ರಾಮದ ಸರ್ವೆ ನಂ. 130 ರಲ್ಲಿರುವ 1.42 ಸೆಂಟ್ಸ್ ಜಮೀನು ಸರ್ಕಾರಿ ಜಮೀನಾಗಿದ್ದು ಸದರಿ ಜಮೀನಿನಲ್ಲಿ ಅಕ್ರಮವಾಗಿ 3ನೇ ಎದುರುದಾರರು ಕಟ್ಟಡ ನಿರ್ಮಿಸಿದ್ದನ್ನು ನಿಯಮಾನುಸಾರ ತೆರವುಗೊಳಿಸಿ ಜಮೀನನ್ನು ಸರ್ಕಾರದ ವಶಕ್ಕೆ ಪಡೆದು ಸಾರ್ವಜನಿಕರಿಗೆ ಆಗುತ್ತಿರುವ ತೊಂದರೆ ನಿವಾರಣೆಗೆ ಅಗತ್ಯ ಕ್ರಮ ಜರುಗಿಸಬೇಕಾಗಿ ನಿರ್ದೇಶಿಸಿ ಶಿಸ್ತು ಪ್ರಾಧಿಕಾರಕ್ಕೆ ಕರ್ನಾಟಕ ಲೋಕಾಯುಕ್ತ ಕಾಯ್ದೆ 1984ರ ಕಲಂ 12(1) ರಡಿಯಲ್ಲಿ ಪ್ರದತ್ತವಾದ ಅಧಿಕಾರದಡಿಯಲ್ಲಿ ಶಿಫಾರಸ್ಸು ಮಾಡಿದೆ.

13. ಮುಂದುವರೆದು, ಕರ್ನಾಟಕ ಲೋಕಾಯುಕ್ತ ಕಾಯ್ದೆಯ ಕಲಂ 12(2) ರ ಪ್ರಕಾರ, ಶಿಸ್ತು ಪ್ರಾಧಿಕಾರವು ವರದಿಯನುಸಾರ ಕೈಗೊಂಡ ಕ್ರಮದ ಬಗ್ಗೆ ಅಥವಾ ಕೈಗೊಳ್ಳಬಹುದಾದ ಕ್ರಮದ ಬಗ್ಗೆ, ಈ ವರದಿ ತಲುಪಿದ ದಿನಾಂಕದಿಂದ ಒಂದು ತಿಂಗಳೊಳಗಾಗಿ ಈ ಪ್ರಾಧಿಕಾರಕ್ಕೆ ವರದಿ ಮಾಡಲು ಸೂಚಿಸಲಾಗಿದೆ.

ಸಂಬಂಧಪಟ್ಟ ದಾಖಲೆಗಳನ್ನು ಲಗತ್ತಿಸಿದೆ.

[ನ್ಯಾಯಮೂರ್ತಿ ಎನ್. ಆನಂದ] 27/8

**ಉಪಲೋಕಾಯುಕ್ತರು,**

**ಕರ್ನಾಟಕ ರಾಜ್ಯ, ಬೆಂಗಳೂರು.**